**ವಿಶೇಷ ಪ್ರಬಂಧ**

# ಅತಿವಾಸ್ತವಿಕತೆ, ಡಿವಿಜಿ ಮತ್ತು ಅಪೊಲಿನೇರ್

**ಸರ್ರಿಯಲಿಸಂ ಅಥವಾ ಅತಿವಾಸ್ತವಿಕತೆ ಸಾಹಿತ್ಯ ಸಂದರ್ಭದಲ್ಲಿ ಬಳಕೆಯಾಗುವ ಪರಿಕಲ್ಪನೆಗಳಲ್ಲೊಂದು. ವರ್ತಮಾನದ ಬದುಕನ್ನು ನೋಡಿದರೆ ಈ ಅತಿವಾಸ್ತವಿಕತೆ ಎನ್ನುವುದು ಕಟುವಾಸ್ತವವಾಗಿ ನಮ್ಮ ಬದುಕನ್ನು ಆವರಿಸಿಕೊಂಡಿರುವುದಕ್ಕೆ ಹಲವು ಉದಾಹರಣೆಗಳು ದೊರೆಯುತ್ತವೆ. ಅಂದಹಾಗೆ, ಈ 'ಸರ್ರಿಯಲಿಸಂ' ಎನ್ನುವ ಪರಿಕಲ್ಪನೆ ಹುಟ್ಟಿಕೊಂಡಿದ್ದು ಹೇಗೆ? ಈ ಪ್ರಶ್ನೆಗೆ ಉತ್ತರ ನೀಡುವ ಈ ಬರಹ, ಸರ್ರಿಯಲಿಸಂನ ಬೀಜ–ಬೇರುಗಳು ಹೇಗೆ ವಿಶ್ವವ್ಯಾಪಿಯಾಗಿವೆ ಎನ್ನುವುದರ ವಿಶಿಷ್ಟ ಕಥನವೂ ಹೌದು.**

**■ ಎಸ್. ದಿವಾಕರ್**


'ಜೀವನದಲ್ಲಿ ಬಹು ಮುಖ್ಯವಾದದ್ದು ಮೊಂಡುತನ. ಒಂದು ಚಿತ್ರದಲ್ಲಿ ನಾನೇನು ಹೇಳಬೇಕಾಗಿದೆಯೋ ಅದು ಮೂಡದಿದ್ದಾಗ ಗೋಡೆಗೆ ತಲೆ ಚಚ್ಚಿಕೊಳ್ಳುತ್ತೇನೆ, ರಕ್ತ ಸುರಿಯುವವರೆಗೆ.' ಈ ಮಾತು ಆಡಿದವನು ವಿಖ್ಯಾತ ಕಲಾವಿದ ಸಾಲ್ವದೋರ್ ಡಾಲಿ. ಅವನ ಪೇಂಟಿಂಗುಗಳಲ್ಲಿ ಭಾವಗೀತಾತ್ಮಕತೆಯ ಮೆರುಗು ಪಡೆದ ದುಃಸ್ವಪ್ನಸದೃಶ ಲೋಕವೊಂದು ಅನಾವರಣಗೊಳ್ಳುತ್ತದೆ. ಅದಕ್ಕೆ ಸರ್ರಿಯಲಿಸಂ ಶೈಲಿ ಎಂಬ ಹೆಸರೂ ಉಂಟು.

ಸರ್ರಿಯಲಿಸಂ ಕಲಾ ಸೌಂದರ್ಯದ ಒಂದು ಪರಿಕಲ್ಪನೆಯಾಗುವುದಕ್ಕೆ ಮುಂಚೆಯೇ 'ಸ್ಫೂರ್ತಿಯ ಸಂಪೂರ್ಣ ಸ್ವಾತಂತ್ರ್ಯ' ಎಂಬ ಹೆಸರಿನಲ್ಲಿ ಸಾಂಪ್ರದಾಯಿಕ ಸೌಂದರ್ಯಪ್ರಜ್ಞೆಯ ವಿರುದ್ಧ ಎದ್ದ ಒಂದು ದಂಗೆಯಾಗಿತ್ತು. ಆ ದಂಗೆ ಶುರುವಾದದ್ದು 1919ರ ಪ್ಯಾರಿಸಿನಲ್ಲಿ, 'ಲಿತ್ರೇಚರ್' ಎಂಬ ಸಾಹಿತ್ಯ–ವಿರೋಧಿ ಪತ್ರಿಕೆಯಲ್ಲಿ. ಆ ಪತ್ರಿಕೆಯನ್ನು ಹುಟ್ಟುಹಾಕಿದವರು ಆಂದ್ರೆ ಬ್ರೆತೊನ್, ಲೂಯಿ ಆರಗಾನ್, ಫಿಲಿಪ್ ಸೂಪೂಲ್ ಎಂಬ ಮೂವರು ತರುಣ ಕವಿಗಳು. ಅದಕ್ಕೂ ಹಿಂದಿನ ವರ್ಷ, ಅಂದರೆ 1918ರಲ್ಲಿ, ತೀರಿಕೊಂಡಿದ್ದ ಅಪೊಲಿನೇರ್ ಎಂಬ ಕವಿಯ ಬಗ್ಗೆ ಅವರಿಗಿದ್ದ ನಿಷ್ಠೆ, ಗೌರವಗಳಿಂದಲೇ ಅವರು ಒಟ್ಟಾಗಿದ್ದರು.

ಗಿಲಮ್–ಆಲ್ಬೇರ್–ವ್ಲಾದಿಮೀರ್–ಅಲೆಕ್ಸಾಂದ್ರೆ–ಅಪೊಲಿನೇರ್–ಕೋರ್‌ತೋವಿತ್ಜಿ ಎಂಬ ವಾಕ್ಯದೋಪಾದಿಯ ಹೆಸರುಳ್ಳ ಗಿಲಮ್ ಅಪೊಲಿನೇರ್ (1880–1918) ಅವರಿಗೆ, 'ಕವಿಯಾದವನು ಅಜ್ಞಾತದ ಹುಡುಕಾಟದಲ್ಲಿ ತನ್ನ ಸಹಚರನಾದ ಚಿತ್ರಕಾರನ ಜೊತೆ ಹೇಗೆ 'ಸಹಾಪರಾಧಿ'ಯಾಗಬೇಕೆಂದು ತೋರಿಸಿಕೊಟ್ಟ. ಇಂಪ್ರೆಷನಿಸಂ ಶೈಲಿಯ ಕಲೆಯನ್ನು ವಿರೋಧಿಸಿದ ಅವನು 1917ರ ಮೇ 18ರಂದು 'ಪರೇಡ್' ಎಂಬ ಬ್ಯಾಲೆಯ ಕಾರ್ಯಕ್ರಮ ಪತ್ರದಲ್ಲಿ ಉಪಯೋಗಿಸಿದ 'ಸರ್ರಿಯಲಿಸಂ' ಎಂಬ ಶಬ್ದ ಮೊಟ್ಟ ಮೊದಲಿಗೆ ಮುದ್ರಣದಲ್ಲಿ ಕಾಣಿಸಿಕೊಂಡಿತೆನ್ನಬೇಕು. ಆದರೆ ಅದಕ್ಕೂ ಮೊದಲೇ 1917ರ ಮಾರ್ಚ್ ತಿಂಗಳಲ್ಲಿ ಪಾಲ್ ಡೆರ್ಮೀ ಎನ್ನುವವನಿಗೆ ಅವನು ಬರೆದ ಪತ್ರದಲ್ಲಿ ಹೀಗೆ ಹೇಳಿದ್ದ: "ಸರ್ರಿಯಲಿಸಂ ಇನ್ನೂ ಯಾವುದೇ ನಿಘಂಟಿನಲ್ಲಿಲ್ಲವೆಂದು ನನಗೆ ಗೊತ್ತು. ಆದರೂ ಇವತ್ತಿನ ಮನೋಧರ್ಮವನ್ನು ಗ್ರಹಿಸಬೇಕಾದರೆ ಅದಕ್ಕೆ 'ಸರ್ರಿಯಲಿಸಂ' ಶಬ್ದವೇ ಹೆಚ್ಚು ಸೂಕ್ತವೆಂದು ಅನ್ನಿಸುತ್ತದೆ..." (ಇಂಗ್ಲಿಷಿನಲ್ಲಿ ಮೊದಮೊದಲು ಈ ಶಬ್ದಕ್ಕೆ ಪರ್ಯಾಯವಾಗಿ ಉಪಯೋಗಿಸುತ್ತಿದ್ದ ಶಬ್ದ 'ಸೂಪರ್ ರಿಯಲಿಸಂ'. 1950ರ ದಶಕದಲ್ಲಿ ಆ ಶಬ್ದ ಹಿಂದೆ ಸರಿದು ಸರ್ರಿಯಲಿಸಂ ಶಬ್ದವೇ ಉಳಿದುಕೊಂಡಿತು.)

ಕ್ಯೂಬಿಸ್ಟ್ ಕಲಾವಿದರು ಏನನ್ನು ಸೃಷ್ಟಿಸುತ್ತಿದ್ದರೆಂದು ಅರ್ಥಮಾಡಿಕೊಂಡ ಮೊಟ್ಟಮೊದಲ ಕವಿ ಅಪೊಲಿನೇರ್. ಅವನು ಬ್ರಾಖ್, ಮಾತಿಸ್, ವ್ಲಾಮಿಂಕ್, ಡೆರೇನ್ ಮೊದಲಾದ ಕಲಾವಿದರ ಕೃತಿಗಳನ್ನು, ಕಲಾ ವಿಮರ್ಶಕರು ಗುರುತಿಸುವುದಕ್ಕೆ ಮುಂಚೆಯೇ, ಗುರುತಿಸಿ, ಅವುಗಳ ಮಹತ್ವವನ್ನು ಕೊಂಡಾಡಿದ ಸೂಕ್ಷ್ಮಜ್ಞ; ಪಿಕಾಸೊ ಎಂಥ ಅನನ್ಯ ಕಲಾವಿದನೆಂದು 1905ರಷ್ಟು ಹಿಂದೆಯೇ ಜಗತ್ತಿಗೆ ತೋರಿಸಿಕೊಟ್ಟ ದಾರ್ಶನಿಕ ವಿಮರ್ಶಕ. ಅವನ ವರ್ಚಸ್ಸಿನಿಂದಾಗಿಯೇ ಸರ್ರಿಯಲಿಸಂ ಭಾವನೆಗಳ, ವಿಚಾರಗಳ ಹಾಗೂ ಕಲಾತ್ಮಕ ಅಭಿವ್ಯಕ್ತಿಯ ವಾತಾವರಣವನ್ನು ತೀವ್ರವಾಗಿ ಪ್ರಭಾವಿಸಿತು; ಪೇಂಟಿಂಗಿನಲ್ಲಿ ಮತ್ತು ಕಾವ್ಯದಲ್ಲಿ ಅಪರೂಪವಾದದ್ದನ್ನು ಸಾಧಿಸಿತು.

ನಮ್ಮ ನವ್ಯರ ಕಾಲದಲ್ಲಿ ಆಗೊಮ್ಮೆ ಈಗೊಮ್ಮೆ ಸರ್ರಿಯಲಿಸಂ ಶಬ್ದ ಕೇಳಿಬರುತ್ತಿತ್ತಲ್ಲವೆ? ಅದಕ್ಕೆ ಹೆಸರೊಂದನ್ನು ಕೊಟ್ಟು ಬರೆದಿರುವ ಒಂದೇ ಒಂದು ಲೇಖನವಿದೆ ಕನ್ನಡದಲ್ಲಿ. ಅದನ್ನು ನಮ್ಮ ವಿಮರ್ಶಕರು ಯಾರೂ ಬರೆಯದೆ ಡಿ.ವಿ.ಜಿ.ಯವರು ಬರೆದರೆಂಬುದು ನಿಜಕ್ಕೂ ಆಶ್ಚರ್ಯಕರ. 'ಅತಿವಾಸ್ತವಿಕತೆ' ಎಂಬ ಶೀರ್ಷಿಕೆಯ ಆ ಲೇಖನ ಡಿ.ವಿ.ಜಿ.ಯವರು ಯಾವುದೋ ಸಂದರ್ಭದಲ್ಲಿ ನೀಡಿದ ಭಾಷಣದ ಒಂದು ಪಾಠ. ಡಿ.ವಿ.ಜಿ.ಯವರ ಹಳೆಯ ಕಾಗದ ಪತ್ರಗಳಲ್ಲಿ ಹುದುಗಿದ್ದ ಆ ಲೇಖನವನ್ನು ಹುಡುಕಿ ತೆಗೆದವರು ಬಿ.ಜಿ.ಎಲ್. ಸ್ವಾಮಿ. ಅವರಿಂದ ನನ್ನ ಕೈಗೆ ಬಂದ ಆ ಲೇಖನವನ್ನು ನಾನು ಗೋಪಾಲಕೃಷ್ಣ ಅಡಿಗರಿಗೆ ಕೊಟ್ಟೆ. 'ಏನಯ್ಯಾ, ನಮ್ಮ ಪತ್ರಿಕೆಗೆ ಡಿ.ವಿ.ಜಿ.ಯವರೂ ಬಂದುಬಿಟ್ಟರಲ್ಲ' ಎಂದು ವಿಸ್ಮಯದಿಂದಲೇ ನಸುನಕ್ಕ ಅವರು ಅದನ್ನು ತಮ್ಮ 'ಸಾಕ್ಷಿ'ಯ ಕೊನೆ ಕೊನೆಯ ಸಂಚಿಕೆಯೊಂದರಲ್ಲಿ ಪ್ರಕಟಿಸಿದರು.



ಕಾಲವನ್ನು ಕುಂಚದಲ್ಲಿ ಹಿಡಿಯಲು ಹಂಬಲಿಸಿದ ಅಪೂರ್ವ ಕಲಾಕೃತಿ ಡಾಲಿ

ಡಿ.ವಿ.ಜಿ.ಯವರ ಇತರ ಗದ್ಯ ಬರಹಗಳಂತೆ ಈ ಲೇಖನವೂ ಅವರ ವಿಚಾರಸ್ಪಷ್ಟತೆಯಿಂದ, ಪರಿಕಲ್ಪನೆಗಳನ್ನು ವಿಶದಪಡಿಸುವ ಖಚಿತವಾದ ಭಾಷೆಯಿಂದ ಗಮನ ಸೆಳೆಯುತ್ತದೆ. ಅದರ ಕೆಲವು ಭಾಗಗಳನ್ನಷ್ಟೆ ಇಲ್ಲಿ ಉಲ್ಲೇಖಿಸಿದ್ದೇನೆ:

"ಸಾಹಿತ್ಯದಲ್ಲಿ ಬೂರ್ಜ್ವಾ ಸಮಾಜಕ್ಕೂ ಅದರ ಮನೋವೃತ್ತಿಗೂ ವಿರೋಧವಾಗಿ ನಿಂತ